'ಏನು ನೂಕುನುಗ್ಗಲಪ್ಪ ಇದು! ಇಷ್ಟೊಂದು ಜನ ಎಂದೂ ಬರ್ತಿರಲಿಲ್ಲ! ಎಲ್ಲಿ ಭೂಕಂಪವೋ, ಭೂಕುಸಿತವೋ, ಸುನಾಮಿಯೋ, ಯುದ್ಧವೋ, ರೋಗೋದ್ರೇಕವೋ? ಹಿಂಗೆ ಹಿಂಡುಹಿಂಡಾಗಿ ಜನ ಸಾಯ್ತಿದಾರಲ್ಲ?' ಎಂದ ಒಬ್ಬ. ಅವನು ಜನಜಂಗುಳಿಯನ್ನು ಹದ್ದುಬಸ್ತಿನಲ್ಲಿಡಲು ಪೇಚಾಡುತ್ತಿದ್ದ.

ಇನ್ನೊಬ್ಬ 'ಹಾಗೇನಿಲ್ಲ. ದೇವಲೋಕದಲ್ಲೀಗ ಜಾರಿಗೊಂಡಿರುವ ಹೊಸ ಕಾನೂನುಗಳಿಂದ ನೂಕುನುಗ್ಗಲು ಕಾಣಿಸ್ತಿದೆ ಅಷ್ಟೇ. ಮೊದ್ಲೂ ಇಷ್ಟೇ ಜನ ಸಾಯ್ತಿದ್ರು. ಈಗ್ಲೂ ಅಷ್ಟೇ' ಅಂದ.



ಮೊದಲನೆಯವನಿಗೆ ಎಲ್ಲವೂ ಸುಸೂತ್ರವಾಗಿ ನಡೆಯುತ್ತಿದ್ದಾಗ ಹೊಸ ಕಾನೂನು ತಂದು ರಾಡಿ ಎಬ್ಬಿಸಿದ್ದು ಅಸಂಬದ್ಧವಾಗಿ ಕಾಣುತ್ತಿತ್ತು. ಆದರೆ ಹೊಸ ಕಾನೂನುಗಳ ವಿರುದ್ಧ ಮಾತಾಡುವ ಹಾಗಿರಲಿಲ್ಲ. ನರಮನುಷ್ಯರಿಗಾದರೆ ತಿಳಿಹೇಳಬಹುದು. ಆದರೆ ಬ್ರಹ್ಮಾಂಡವನ್ನು ಸೃಷ್ಟಿಸಿದ ದೈವಕ್ಕೆ ಸಲಹೆ ಸೂಚನೆ ಕೊಡಲಾದೀತೇ? ಹೊಸತಾಗಿ ಜಾರಿಯಾದ ಕಾನೂನುಗಳು ತಿಪ್ಪರಲಾಗ ಹಾಕಿದರೂ ಅವನಿಗೆ ಅರ್ಥವಾಗುತ್ತಿರಲಿಲ್ಲ.

ಭೂಲೋಕದಲ್ಲಿ ಸತ್ತವರೆಲ್ಲ ನೇರವಾಗಿ ಇಲ್ಲಿಗೆ ಅಂದರೆ ದೇವಲೋಕಕ್ಕೆ ರವಾನೆಯಾಗುತ್ತಿದ್ದರು. ಅವರನ್ನೆಲ್ಲ ಒಳಗೆ ಬಿಟ್ಟುಕೊಳ್ಳಲಾಗುತ್ತಿತ್ತು. ಅದು ಕೋಟೆಯಂತಿದ್ದು, ಅದರ ಗೋಡೆಗಳು ಚೀನಾದ ಮಹಾಗೋಡೆಗಿಂತ ಅನೇಕ ಪಟ್ಟು ದೊಡ್ಡವಾಗಿದ್ದವು. ಪ್ರವೇಶಿಸಿದವರ ಸಂಖ್ಯೆಯನ್ನಷ್ಟೇ ನಮೂದಿಸಿಕೊಂಡು ಇನ್ನೊಂದು ವಲಯಕ್ಕೆ ಅವರನ್ನು ಕಳುಹಿಸಿಕೊಡುತ್ತಿದ್ದರು. ಆ ಇನ್ನೊಂದು ವಲಯವು ಬೃಹತ್ ಶೆಡ್ ಆಗಿತ್ತು. ಅಲ್ಲಿ ಎಂದೂ ಸ್ವರ್ಗ ನರಕಗಳೆಂಬ ವಿಭಾಗಗಳಿರಲಿಲ್ಲ. ಎಲ್ಲರನ್ನೂ ಅವರವರು ಎಸಗಿರುವ ಒಳ್ಳೆಯ ಅಥವಾ ಕುಕೃತ್ಯಗಳನ್ನು ಪರಿಗಣಿಸಿ ಅನುಕ್ರಮವಾಗಿ ಅರಮನೆಗೆ ಅಥವಾ ಗುರುಮನೆಗೆ ಕಳುಹಿಸಲಾಗುತ್ತಿತ್ತು. ಸಜ್ಜನರು ನೇರವಾಗಿ ಅರಮನೆ ಸೇರುತ್ತಿದ್ದರು. ಕುಕೃತ್ಯದ ಮಹಾಶಯರು ಕೆಲಕಾಲ ಗುರುಮನೆಯಲ್ಲಿದ್ದು, ರಿಪೇರಿಯಾಗಿ ಸಜ್ಜನರಾಗಿ ಹೊರಹೊಮ್ಮುತ್ತಿದ್ದರು. ಅನಂತರ ಅವರನ್ನು ಅರಮನೆಗೆ ಕಳುಹಿಸಲಾಗುತ್ತಿತ್ತು. ದೇವಲೋಕದಲ್ಲಿ ಹಿಂಸೆಯೆಂಬುದು ಇರಲೇ ಇಲ್ಲ.

ದೇವಲೋಕದಲ್ಲಿ ಜಾರಿಗೆ ಬಂದಿದ್ದ ಹೊಸ ಕಾನೂನುಗಳ ಪ್ರಕಾರ ಮರಣಾನಂತರ ಭೂಲೋಕದಿಂದ ದೇವಲೋಕಕ್ಕೆ ಬಂದವರೆಲ್ಲರನ್ನೂ ಶೆಡ್ಡಿನ ಗೇಟಿನಲ್ಲಿಯೇ ಸ್ಕ್ಯಾನಿಂಗ್ ಮಾಡಲಾಗುತ್ತಿತ್ತು. ಹುಟ್ಟುವಾಗ ದೇವಲೋಕದಿಂದ ಭೂಲೋಕಕ್ಕೆ ಹೋದವರು ದೇಹದ ಯಾವ್ಯಾವ ಅಂಗಾಂಗಗಳೊಂದಿಗೆ ತೆರಳುತ್ತಿದ್ದರೋ ಮತ್ತು ಜೀವಿತಾವಧಿಯಲ್ಲಿ ಸ್ವಾಭಾವಿಕವಾಗಿ ವಿಕಾಸಗೊಂಡ ಅಂಗಗಳೊಂದಿಗೆ ಮಾತ್ರ ಮರಣಾನಂತರ ವಾಪಸ್ಸಾಗಬೇಕು. ಅಂದರೆ ದೈವಸೃಷ್ಟಿಯ ಶುದ್ಧ ದೇಹದೊಂದಿಗೆ ವಾಪಸ್ಸಾಗಬೇಕು. ಯಾವುದಾದರೂ ಕೃತಕ ಅರ್ಥಾತ್ ಮಾನವ ನಿರ್ಮಿತ ಅಂಗಗಳೊಂದಿಗೆ ವಾಪಸ್ಸಾಗಿದ್ದರೆ ಅವರನ್ನು 'ಬೆರಕೆಗಳು' ಎಂದು ಪರಿಗಣಿಸಿ ಶೆಡ್ಡಿನೊಳಗೇ ಇರಿಸಿಕೊಳ್ಳಲಾಗುತ್ತಿತ್ತು. ಈ ಬೆರಕೆ ದೇಹದವರು ದೇವಲೋಕದ ಪರೀಕ್ಷೆಗಳಿಗೆ ಒಳಗಾಗಬೇಕಿತ್ತು.

ಉದಾಹರಣೆಗೆ ಹೇಳಬೇಕೆಂದರೆ ಯಾರಾದರೂ ಕೃತಕ ಹಲ್ಲುಗಳನ್ನು ಕಟ್ಟಿಸಿಕೊಂಡು ಬಂದಿದ್ದರೆ, ಅಥವಾ ಹುಳುಕು ಹಲ್ಲಿಗೆ ಸಿಮೆಂಟ್ ಭರ್ತಿ